ಶ್ರೀ ಹೆಚ್. ಆರ್. ಕೇಶವಮೂರ್ತಿ.—ಕೆಲವು ಸೊಸೈಟಿಗಳಲ್ಲಿ ಷೇರ್ ಕ್ಯಾಪಿಟರ್ ಅಥವಾ ಗ್ರಾಸ್ ಇನ್‌ಕಂ ಕಡಿಮೆ ಇದ್ದರೂ, ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆಂಡಿಚರ್ ಸಿಕ್ಕಾಪಟ್ಟೆ ಮಾಡುತ್ತಿದ್ದಾರೆ. ಇಷ್ಟು ಇಕಮ್ಮಿಗೆ ಇಷ್ಟು ಎಕ್ಸ್‌ಪೆಂಡಿಚರ್ ಮೀರಿರಬಾರದೆಂದು, ಒಂದು ಪ್ರಪೋರ್ಷನ್ ಫಿಕ್ಸ್ ಮಾಡಿ, ಎಕ್ಸ್‌ಪೆಂಡಿಚರಿಗೆ ಲಿಮಿಟ್ ಹಾಕುತ್ತೀರಾ ?

Sri KONDAJJI BASAPPA.—It is a hypothetical case.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮಾನ್ಯ ಗಾಂಜಿ ಏರಪ್ಪನವರು ಹೇಳಿದಹಾಗೆ, ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಮಾಡತಕ್ಕಂಥ ಕೇಸುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಹಣ ಹಿಂದಕ್ಕೆ ಕೊಟ್ಟುಬಿಟ್ಟರೆ ಕ್ರಿಮಿನಲ್ ಕೇಸು ಹಾಕುವುದಿಲ್ಲವೆಂದು ಬೆಂಗಳೂರು ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ಮಿಸ್‌ಅಪ್ರೊಪ್ರಿಯೇಟ್ ಆಗಿರತಕ್ಕಂಥ ಸೊಸೈಟಿಗಳಲ್ಲಿ ಆಪಾದಿತರು 5—10 ಸಾವಿರ ಖಜಾನೆಗೆ, ವ್ಯಾಸಿಕ್ಯೂಷನ್ ತಪ್ಪಿಸಿಕೊಳ್ಳಲು ಕಟ್ಟುತ್ತಿದ್ದಾರೆ, ಆದ್ದರಿಂದ ಸರಕಾರ ಹೊರಡಿಸಿರುವ ಹುಕುಮನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಯೆ ?

Sri KONDAJJI BASAPPA.—It does not arise out of this Question.

Mr. SPEAKER.—The question is if the Government proposes to withdraw that circular.

Sri KONDAJJI BASAPPA.—We do not propose to withdraw the circular.

ಶ್ರೀ ಜಿ. ವಿ. ಗೌಡ.—ಒಬ್ಬ ಕಳ್ಳ ಒಂದು ಸಾಮಾನನ್ನು ಕದ್ದುಬಿಟ್ಟು, ಆ ಕದ್ದ ಸಾಮಾನನ್ನು ಹಿಂದಕ್ಕೆ ತಂದುಕೊಟ್ಟರೆ ಹಾಕಿರತಕ್ಕ ಚಾರ್ಜುಷೀಟನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರೋ ?

Sri KONDAJJI BASAPPA.—It is not so.

Restoration of Adalagere Tank in Gubbi Taluk.

*Q.—628. Sri N. HUCHAMASTI GOWDA (Chandrasekharapura).—Will the Government be pleased to state :—

(*a*) when the estimate for the restoration of Adalagere tank in Gubbi Taluk was sanctioned ;

(*b*) the date on which the tender called for was approved ;

(*c*) when the works order was issued ;

(*d*) the progress made so far ;

(*e*) whether it is a fact that either the Chief Engineer or any other Officer has extended the stipulated period ;

(*f*) the date on which the said work has to be completed as per the terms of the tender ?

*A.—Sri VEERANDRA PATIL (Minister for Public Works).—

(*a*) During June 1959.
(*b*) During January 1961.
(*c*) During January 1961.
(*d*) Rs. 2,200.
(*e*) Yes.
(*f*) 1-12-1961.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಂದಾಜು 1959ನೇ ಇಸವಿಯಲ್ಲಿ ಮುಂಜೂರು ಆಗಿದ್ದರೂ ಆಗಿಂದಾಗ್ಗೆ ಚೀಫ್ ಇಂಜಿನಿಯರು ಕಂಟ್ರಾಕ್ಟರಿಗೆ ಕೆಲಸ ಪೂರೈಸತಕ್ಕಂಥ ವಾಯಿದೆಯನ್ನು ಹೆಚ್ಚು ಮಾಡಿದ್ದಕ್ಕೆ ಕಾರಣವೇನು ?

† ಶ್ರೀ ವೀರೇಂದ್ರ ಪಾಟೀಲ್.—1959ರಲ್ಲಿ ಅಂದಾಜು ಆಗಿದ್ದರೂ ಕೆಲಸ ಪ್ರಾರಂಭಮಾಡಿದ್ದು 11—10—1960ರಲ್ಲಿ. ಅಗ್ರಿಮೆಂಟು ಮಾಡಿಕೊಂಡಿರುವುದು 20—1—1961ರಲ್ಲಿ. ಮೊದಲು ಎರಡು ಸಲ ಟೆಂಡರ್ ಕರೆದಾಗ ರೆಸ್ಪಾನ್ಸು ಬರಲಿಲ್ಲ. ಮೂರನೆ ಸಲ ರೆಸ್ಪಾನ್ಸು ಬಂದಿತು; ಅದು 18 ಪರ್ಸೆಂಟು ಇದ್ದು ಅದನ್ನು ಸರಕಾರ ಮಂಜೂರು ಮಾಡಿ ಅದನ್ನು ಒಪ್ಪಿಕೊಳ್ಳುವುದರಲ್ಲಿ ತಡವಾಯಿತು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—(ಇ) ನಲ್ಲಿ ಹೇಳಿರುವಂತೆ ಚೀಫ್ ಇಂಜನಿಯರು ಆ ರೀತಿ ವಾಯಿದೆಯನ್ನು ಹೆಚ್ಚು ಮಾಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಕಾರಣವಿಷ್ಟೆ: ಎರಡು ಸಲ ಟೆಂಡರ್ ಕರೆದಾಗ ಯಾರೂ ಬರಲಿಲ್ಲ. ಮೂರನೆ ಸಲ ರೆಸ್ಪಾನ್ಸು ಬಂದಿತು, ಆ ಕೆಲಸವನ್ನು 1960-61 ರಲ್ಲಿ ಒಪ್ಪಿಸಿತು. ಫೈನಲ್ ನೋಟೀಸು ಕೊಟ್ಟಿದೆ, ಮಂಜೂರು ಮಾಡಿದ ಕಂಟ್ರಾಕ್ಟನ್ನು ಟರ್ಮಿನೇಟ್ ಮಾಡಿ ಫೈನಲ್ ಏಜನ್ಸಿ ಫಿಕ್ಸ್ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಆ ಪ್ರದೇಶದಲ್ಲಿ ಬಹಳ ಅಭಾವ ಪರಿಸ್ಥಿತಿ ಇರುವುದರಿಂದ, ಬೇರೆ ಯಾರಾದರೂ ಕಂಟ್ರಾಕ್ಟರಿಗೆ ಕೆಲಸ ಕೊಟ್ಟು ಪೂರ್ತಿ ಮಾಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಫೈನಲ್ ನೋಟೀಸು ಕೊಟ್ಟಿದೆ. ಇಷ್ಟರೊಳಗೆ ರೇಟೆಸ್ಟ್ ಪೊಜಿಷ್ಟ್ ಏನಿದೆ ಎಂಬುದನ್ನು ತರಿಸಿಕೊಂಡು, ಒಂದು ವೇಳೆ ಕೆಲಸಮಾಡಿಲ್ಲದೆ ಇದ್ದರೆ ಇನ್ನೊಬ್ಬರಿಗೆ ಮಹಿಸುತ್ತೇವೆ.

ಶ್ರೀ ವಿ. ಎಂ. ದೇವ್.—ಈ ಕಂಟ್ರಾಕ್ಟರಿಗೆ ಯಾವ ಕೆಲಸಗಳನ್ನು ಒಪ್ಪಿಸಿದರೂ, ಅದನ್ನು ಪೂರ್ತಿಸದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆತನು ತಮ್ಮ ಪಾರ್ಟಿಗೆ ಸೇರಿರುವುದರಿಂದ ಕೆಟ್ಟ ರಾಜಕೀಯ ಇದರಲ್ಲಿ ತಂದಿದ್ದಾರೆ. ಅದನ್ನು ಕೇಳಲಾರದೆ ನಂಕಟಪಟ್ಟು ಹುಚ್ಚಮಾಸ್ತಿ ಗೌಡರು ಸುತ್ತಿ ಸುತ್ತಿ ಕೇಳುತ್ತಿದ್ದಾರೆ.

Mr. SPEAKER.—I am not concerned with it.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಟೆಂಡರು ಹಾಕಿ ಅಕ್ಸೆಪ್ಟ್ ಮಾಡಿದ ಮೇಲೆ ಟೈಮ್ ಲಿಮಿಟ್ಟು ಹಾಕಿರಲಿಲ್ಲವೆ ? ಫೈನಲ್ ನೋಟೀಸು ಕೊಡಬೇಕಾದ ಅಗತ್ಯವೇನು ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ನೋಟೀಸುಗಳನ್ನು ಕೊಟ್ಟಿದ್ದೇವೆ, ಫೈನಲ್ ನೋಟೀಸೂ ಕೊಟ್ಟಿದ್ದೇವೆ, ಎರಡನೇ ಏಜನ್ಸಿ ಫಿಕ್ಸ್ ಮಾಡುತ್ತೇವೆ.

12-30 P.M.

†ಶ್ರೀ ಆರ್. ಎಸ್. ಪಾಟೀಲ್.—ಈವರೆಗೆ ಸಾಧಿಸಿರುವ ಪ್ರಗತಿಯೇನು ಎಂದು ಕೇಳಿರು 2,200 ರೂಪಾಯಿಗಳು ಎಂದು ಹೇಳಿದ್ದೀರಿ. ಇದು ಏನು ?

ಶ್ರೀ ವೀರೇಂದ್ರ ಪಾಟೀಲ್.—2,200 ರೂಪಾಯಿ ಬೆಲೆ ಬಾಳುವಂಥಹ ಕೆಲಸ ಮಾಡಿದ್ದಾರೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ದೇವ್‌ಅವರು ಕೇಳಿರುವ ಪ್ರಶ್ನೆಯಲ್ಲಿ ಒಂದು ಅರ್ಥ ಇದೆ. ಈ ಕಂಟ್ರಾಕ್ಟ್‌ದಾರರು, ಎಲ್ಲಾ ಕೆಲಸಗಳಿಗೂ ಟೆಂಡರ್ ಹಾಕಿ ಎಲ್ಲಕ್ಕೂ ಲೋಯಸ್ಟ್ ಕೊಟ್ಟೇ ಷರ್ ಕೊಟ್ಟು 1957 ರಿಂದ ಇವತ್ತಿನವರೆಗೂ ಯಾವ ಕೆಲಸವನ್ನೂ ಪೂರ್ತಿ ಮಾಡದೆ ಮೂರು ಜನ ಚೀಫ್ ಇಂಜನಿಯರುಗಳು ಇವರನ್ನು ಬ್ಲಾಕ್ ಲಿಸ್ಟ್ ಮಾಡಿದ್ದರೂ ಇವರಿಗೆ ಈ ಕೆಲಸವನ್ನು ಕೊಟ್ಟಿರುವುದಕ್ಕೆ ಕಾರಣವೇನು ? ಇವರು ಅವರಿಗೆ ಕೊಟ್ಟಿದ್ದ ಸಿಮೆಂಟು ಮತ್ತು ಕಬ್ಬಿಣವನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಂಡಿದ್ದಕ್ಕೆ ಅವರ ಮೇಲೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ? ಈಗಲಾದರೂ ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿ ಅವರಿಗೆ ಕೊಟ್ಟಿರತಕ್ಕ ಕೆಲಸವನ್ನು ಬೇರೆಯವರಿಗೆ ಕೊಟ್ಟು ಅವುಗಳನ್ನು ಪೂರ್ತಿ ಮಾಡಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಕೆಲಸದ ಬಗ್ಗೆ ಹೇಳಬೇಕಾದರೆ ಅವರು ಕಡಮೆ ರೇಟ್ ಕೋಟ್ ಮಾಡಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. 50-60 ಕೆಲಸ ತೆಗೆದುಕೊಂಡು ಯಾವುದನ್ನೂ ಮುಗಿಸಿಲ್ಲ ಎಂದು ಹೇಳುತ್ತಾ ಇದ್ದಾರೆ, ಆ ರೀತಿ ಮಾಡಿದ್ದರೆ ಬಹುಶಃ ಅವರನ್ನು ಬ್ಲಾಕ್‌ಲಿಸ್ಟ್ ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ ಯಾವುದೂ ಖಚಿತವಾಗಿ ಗೊತ್ತಿಲ್ಲದೆ ಏನೂ ಕೂಡ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಎಂ. ದೇವ್.—ಒಂದು ಕೇಸನ್ನು ಎರಡು ವರ್ಷದ ಹಿಂದೆಯೇ ಹೇಳಿದ್ದೆ. ಅದರ ವಿಷಯದಲ್ಲಿ ಇದುವರೆಗೂ ಏನೂ ಮಾಡಿಲ್ಲ ಎಂದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಸಲ ಅನೇಕ ಮಾತುಗಳನ್ನು ಕೇಳುತ್ತಾ ಇರುತ್ತೀರಿ; ಅವನ್ನೆಲ್ಲಾ ನೆನಪು ಇಡುವುದಕ್ಕೆ ಸಾಧ್ಯವಿಲ್ಲ.